ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 763 (681)

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಉತ್ತರಿಸುವ ದಿನಾಂಕ : 15.12.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿಯನ್ನು ತಂದಿದ್ದು, ಇದರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರ್ಕಾರ ಯಾವ ಮಾನದಂಡಗಳನ್ನು ಹಮ್ಮಿಕೊಳ್ಳಲಾಗಿದೆ.	ರಾಜ್ಯದಲ್ಲಿ ನೂತನ ಕೈಗಾರಿಕಾ ನೀತಿ 2020-25 ನ್ನು ದಿನಾಂಕ 13/08/2020 ರಂದು ಜಾರಿಗೆ ತಂದಿದ್ದು, ಕೈಗಾರಿಕೆಗಳನ್ನು ಸ್ಥಾಪಿಸಲು ಈ ಕೆಳಕಂಡಂತೆ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ನೀಡಲು ಅವಕಾಶ ಕಲ್ಪಿಸಿದೆ. 1. ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ವಿನಾಯಿತಿ 2. ಇಟಿಪಿ ಘಟಕ ಸಹಾಯಧನ. 3. ಅಂಕರ್ ಘಟಕ ಸಹಾಯಧನ. 4. ಭೂ ಪರಿವರ್ತನಾ ಶುಲ್ಕ ಮರುಪಾವತಿ. 5. ವಹಿವಾಟಿನ ಮೇಲೆ ಸಹಾಯಧನ. 6. ಖಾಸಗಿ ಕೈಗಾರಿಕಾ ಪಾರ್ಕ್ ಅಭಿವೃದ್ಧಿದಾರರಿಗೆ ಪ್ರೋತ್ಸಾಹಗಳು. 7. ಆರೋಗ್ಯ ರಕ್ಷಣೆ ಉದ್ದಿಮೆದಾರರಿಗೆ ಬೆಂಬಲ. 8. ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳ ಸ್ಥಾಪನೆಗೆ ಬೆಂಬಲ. 9. ಕೌಶಲ್ಯಾಭಿವೃದ್ಧಿಗೆ ಬೆಂಬಲ. 10. ಇಂಡಸ್ಟ್ರೀ 4.0ಗೆ ಬೆಂಬಲ. ಇದಲ್ಲದೆ ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. • ದೇಶ ವಿದೇಶಗಳ ಹಲವಾರು ಪ್ರತಿಷ್ಠಿತ ಕಂಪನಿಗಳೊಂದಿಗೆ ಕರ್ನಾಟಕದಲ್ಲಿ ಬಂಡವಾಳ ಹೂಡಲು ಸಭೆಗಳನ್ನು ಮಾನ್ಯ ಕೈಗಾರಿಕ ಸಚಿವರ/ಪ್ರಧಾನ ಕಾರ್ಯದರ್ಶಿಗಳ / ಕೈಗಾರಿಕಾಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಸರಣಿ ಸಭೆಗಳನ್ನು ನಡೆಸಲಾಗುತ್ತಿದೆ. • ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಭೂಮಿ ಖರೀದಿ ಪ್ರಕ್ರಿಯೆ ಸರಳಿಕರಣಗೊಳಿಸಲಾಗಿದೆ. • ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಅನುಮತಿಗಳನ್ನು ಪಡೆಯಲು 3 ವರ್ಷಗಳ ವರೆಗೆ ಸಮಯವನ್ನು ವಿಸ್ತರಿಸಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002ಕ್ಕೆ ತಿದ್ದುಪಡಿ ತರಲಾಗಿದೆ.

<table>
<tr><td></td><td></td><td>• ಕೈಗಾರಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಕಾರ್ಮಿಕ ಕಾನೂನನ್ನು ಸರಣೀಕರಣಗೊಳಿಸಲಾಗಿದೆ.
• ಕೈಗಾರಿಕೆಗಳನ್ನು ಶೀಘ್ರವಾಗಿ ಅಡತಡೆಗಳಿಲ್ಲದೆ, ಪ್ರಾರಂಭಿಸಲು ಇಸ್ ಆಫ್ ಡೂಯಿಂಗ್ ಬಿಸಿನಸ್ಸ್ ಜಾರಿ ಗೊಳಿಸಲಾಗಿದೆ.</td></tr>
<tr><td>ಆ</td><td>ಕೋವಿಡ್–19ರ ಪರಿಣಾಮವಾಗಿ ಸರ್ಕಾರ ಲಾಕ್ ಡೌನ್ ವಿಧಿಸಿದ್ದರಿಂದ ಹಲವಾರು ಉದ್ಯಮಗಳು ನಷ್ಟ ಅನುಭವಿಸಿದ್ದು, ಅವುಗಳು ಪುನರಾರಂಭಗೊಳ್ಳುವುದೇ ಕಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ;</td><td rowspan="2">ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಲಾಕ್‌ಡೌನ್ ಅವಧಿಯಲ್ಲಿ ಅತ್ಯಗತ್ಯ ವಸ್ತುಗಳನ್ನು ಉತ್ಪಾದಿಸುವ ಕೈಗಾರಿಕೆಗಳು ಉತ್ಪನ್ನಗಳನ್ನು ಉತ್ಪಾದಿಸಲು ಅನುಮತಿ ನೀಡಲಾಗಿದೆ. ಲಾಕ್ ಡೌನ್ ತೆರವಾದ ನಂತರ ಎಲ್ಲಾ ಉದ್ಯಮಗಳು ಕಾರ್ಯಾರಂಭ ಮಾಡಿರುತ್ತವೆ.</td></tr>
<tr><td>ಇ</td><td>ಇಂತಹ ರೋಗಪಿಡಿತ ಉದ್ಯಮಗಳಿಂದ ಇದಕ್ಕೆ ಸಂಬಂಧಿಸಿದ ಇತರ ಉದ್ದಿಮೆಗಳು ಸ್ಥಗಿತಗೊಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td></tr>
<tr><td>ಈ</td><td>ಇಂತಹ ರೋಗಪೀಡಿತ ಉದ್ದಿಮೆಗಳಿಂದ (Sick Industries) ಉದ್ಯಮ ಹಾಗೂ ಉದ್ಯೋಗೀಕರಣದ ಮೇಲೆ ಪರಿಣಾಮ ಉಂಟಾಗುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?</td><td>ಕೋವಿಡ್–19 ಲಾಕ್‌ಡೌನ್ ಪರಿಣಾಮವಾಗಿ ತೀವ್ರ ಆರ್ಥಿಕ ಸಂಕಷ್ಟಕ್ಕೀಡಾಗಿರುವ ಕ್ಷೇತ್ರವನ್ನು ಪುನಶ್ಚೇತನಗೊಳಿಸಲು ಸರ್ಕಾರ ಈ ಕೆಳಗಿನ ಕ್ರಮಗಳನ್ನು ಕೈಗೊಂಡಿರುತ್ತದೆ.

ಕರ್ನಾಟಕ ಸರ್ಕಾರದ ಪ್ಯಾಕೇಜ್
1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಎಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.
2. ಇಂಧನ ಇಲಾಖೆಯು ವಿದ್ಯುತ್ ಬಿಲ್‌ನ್ನು ಪ್ರಾಮಾಣಿಕವಾಗಿ ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಟ ಮಿತಿ ರೂ.1 ಲಕ್ಷ, ಎಲ್‌ಟಿ ಗರಿಷ್ಟ ಮಿತಿ ರೂ.10,000/–
<table>
<tr><td>1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ</td><td>ಶೇ 1% ರಿಯಾಯಿತಿ</td></tr>
<tr><td>6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ</td><td>ಶೇ 0.5% ರಿಯಾಯಿತಿ</td></tr>
<tr><td>15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ</td><td>ಯಾವುದೇ ರಿಯಾಯಿತಿ ಇರುವುದಿಲ್ಲ</td></tr>
</table>
3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು ಮಾರ್ಚ್, ಎಪ್ರಿಲ್ ಮತ್ತು ಮೇ 2020 ತಿಂಗಳಲ್ಲಿ ಪಾವತಿಸದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ.</td></tr>
</table>

4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ ಎಪ್ರಿಲ್ ಮತ್ತು ಮೇ 2020 ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.

ಎಪ್ರಿಲ್ 2020 ತಿಂಗಳ ಕಂತು	ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು
ಮೇ 2020 ತಿಂಗಳ ಕಂತು	ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು
ಜೂನ್ 2020 ತಿಂಗಳ ಕಂತು	ಅಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು.

ಭಾರತ ಸರ್ಕಾರದ ಪ್ಯಾಕೇಜ್

1. ಭಾರತ ಸರ್ಕಾರವು **"ಇ.ಸಿ.ಎಲ್.ಜಿ"**–ಎಮರ್ಜೆನ್ಸಿ ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದು ಇದರನ್ವಯ ಫೆಬ್ರವರಿ 2020 ರ ಅಂತ್ಯಕ್ಕೆ ಬ್ಯಾಂಕ್‌ಗಳಲ್ಲಿ ಬಾಕಿ ಇರುವ ಎಂ.ಎಸ್.ಎಂ.ಇ ಘಟಕಗಳ ಸಾಲದ ಮೊತ್ತಕ್ಕೆ ಶೇ 20% ರಷ್ಟು ಹೆಚ್ಚುವರಿ ಸಾಲವನ್ನು ಯಾವುದೇ ಹೆಚ್ಚುವರಿ ಖಾತರಿ ಇಲ್ಲದೇ ನೀಡುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ.

   ಇದರಡಿಯಲ್ಲಿ ಇದುವರೆಗೆ ಬ್ಯಾಂಕ್‌ಗಳು ನೀಡಿರುವ ಸಾಲದ ವಿವರಗಳು ಈ ಕೆಳಗಿನಂತಿವೆ.

	ಒಟ್ಟು ಘಟಕಗಳು	**ಒಟ್ಟು ಸಾಲದ ಮೊತ್ತ (ರೂ.ಲಕ್ಷಗಳಲ್ಲಿ)**
ಅರ್ಹವಿರುವ ಖಾತೆಗಳು	3,00,459	10,69,527
ಸಾಲ ಮಂಜೂರಾತಿ	2,03,014	8,02,953
ಸಾಲ ಬಿಡುಗಡೆ	1,46,409	6,66,116

ಸಿಐ 350 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು